**ಓ ಎಸ್ 145/2023 ಡಿಡಬ್ಲ್ಯೂ5**

**ಸಾಕ್ಷಿಯನ್ನು ದಿಃ 06.06.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಡಿ ಟಿ ವಿ ವಕೀಲರಿಂದಃ**

ನಮ್ಮ ತಂದೆ ತಿರುಮಲೇಗೌಡರಿಗೆ 5 ಜನ ಮಕ್ಕಳು. ಅವರುಗಳೆಂದರೆ ತಿಮ್ಮೇಗೌಡ, ಪುಟ್ಟಮ್ಮ, ಗೋವಿಂದೇಗೌಡ, ವೆಂಕಟೇಶ ಮತ್ತು ಸಣ್ಣೇಗೌಡ. ತಿಮ್ಮೇಗೌಡರು ಈ ದಾವೆಯನ್ನು ಜಮೀನಿನಲ್ಲಿ ತನಗೆ ಬರಬೇಕಾದ ಭಾಗಂಶಕ್ಕಾಗಿ ಹಾಕಿದ್ದಾರೆ. ನಾನು 4 ನೇ ತರಗತಿಯವರೆಗೆ ಓದಿದ್ದೇನೆ.

ನಮ್ಮ ಕುಟುಂಬಕ್ಕೆ ಸರ್ವೆ ನಂ. 27/10 ರಲ್ಲಿ ವಿಸ್ತೀರ್ಣ 2 ಎಕರೆ 0.23 ಗುಂಟೆ, ಸರ್ವೆ ನಂ. 12/2 ರಲ್ಲಿ ವಿಸ್ತೀರ್ಣ 1 ಎಕರೆ 0.10 ಗುಂಟೆ, ಸರ್ವೆ ನಂ. 13/5 ರಲ್ಲಿ ವಿಸ್ತೀರ್ಣ 0.25 ಗುಂಟೆ, ಸರ್ವೆ ನಂ. 21ರಲ್ಲಿ ವಿಸ್ತೀರ್ಣ 1 ಎಕರೆ 0.09 ಗುಂಟೆ ಜಮೀನುಗಳು ಸೇರಿವೆ. ಇತರೆ ಜಮೀನುಗಳ ಸರ್ವೆ ನಂಬರು ಗೊತ್ತಿಲ್ಲ. ಈ ಮೇಲೆ ಹೇಳಿದ ಸರ್ವೆ ನಂಬರು ಜಮೀನುಗಳು ಜಂಟಿ ಖಾತೆಯಾಗಿವೆ ಈಗ ಆಗಿವೆ. ಮೊದಲು ಅವು ನಮ್ಮ ತಂದೆ ತಿರುಮಲೇಗೌಡರ ಹೆಸರಿನಲ್ಲಿ ಇದ್ದವು. ನಮ್ಮ ತಂದೆ ತಿರುಮಲೇಗೌಡರು ತೀರಿಕೊಂಡ ನಂತರ ಎಲ್ಲರ ಹೆಸರಿಗೆ ಪೌತಿ ಜಂಟಿ ಖಾತೆ ಆಗಿದೆ ಎಂದರೆ ಸರಿ. ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಯಾವುದೇ ವಿಭಾಗ ಆಗಿಲ್ಲ ಎಂದರೆ ಪಾಲುಪಟ್ಟಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಪಾಲುಪಟ್ಟಿಯು 1992 ರಲ್ಲಿ ಆಯಿತು. ಆ ಪಾಲುಪಟ್ಟಿಯನ್ನು ನನ್ನ ಅಣ್ಣ ಸಣ್ಣೇಗೌಡರು ನ್ಯಾಯಾಲಯಕ್ಕೆ ಕೊಟ್ಟಿದ್ದಾರೆ. ನಾನಾಗಲೀ, ನನ್ನ ಅಣ್ಣ ಸಣ್ಣೇಗೌಡರಾಗಲೀ ಅಥವಾ ಬೇರೆ ಯಾರೇ ಆಗಲೀ ಯಾವುದೇ ಪಾಲುಪಟ್ಟಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸದೆ ಇದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1991 ರಲ್ಲಿ ನಾವೆಲ್ಲರೂ ಮೌಖಿಕ ವಿಭಾಗ ಮಾಡಿಕೊಂಡಿದ್ದೇವೆ ಎಂದು ನನ್ನ

ಮುಖ್ಯ ವಿಚಾರಣಾ ಪ್ರಮಾಣಪತ್ರಿಕೆಯಲ್ಲಿ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಒಂದು ವೇಳೆ 1991 ರಲ್ಲಿ ಮೌಖಿಕ ವಿಭಾಗ ಮಾಡಿಕೊಂಡಿದ್ದರೆ ನಾವೆಲ್ಲರೂ ಅದರ ಅನುಸಾರ ಲಿಖಿತವಾಗಿ ಪಾಲುಪಟ್ಟಿ ಮಾಡಿಕೊಳ್ಳುತ್ತಿದ್ದೆವು, ಆದರೆ ಹಾಗೆ ಯಾವುದೇ ಮೌಖಿಕ ವಿಭಾಗ ಆಗದೆ ಇರುವ ಕಾರಣ ನಾವು ಯಾವುದೇ ರೀತಿಯ ಲಿಖಿತ ಪಾಲುಪಟ್ಟಿ ಮಾಡಿಕೊಂಡಿಲ್ಲದಿದ್ದರೂ ಸಹ ವಾದಿಗೆ ಮೋಸ ಮಾಡುವ ಸಲುವಾಗಿ ನನ್ನ ಪ್ರತಿವಾದ ಪತ್ರದಲ್ಲಿ ಹಾಗೂ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಸುಳ್ಳು ಸಂಗತಿಗಳನ್ನು ಹೇಳಿದ್ದೇನೆ ಎಂದರೆ ಸರಿಯಲ್ಲ. ಒಂದು ವೇಳೆ ನಾನು ಹೇಳಿದ ಹಾಗೆ ಮೌಖಿಕವಾಗಿ ವಿಭಾಗ ಆಗಿದಿದ್ದರೆ ಕಂದಾಯ ದಾಖಲೆಗಳು ಅವರವರ ಹೆಸರಿಗೆ ಮೌಖಿಕ ವಿಭಾಗದಂತೆ ಖಾತೆಯಾಗಿರುತ್ತಿದ್ದವು, ಆದರೆ ಹಾಗೆ ಯಾವುದೇ ವಿಭಾಗ ಆಗದೆ ಇರುವ ಕಾರಣ ಎಲ್ಲರ ಹೆಸರಿಗೆ ಪೌತಿ ಜಂಟಿ ಖಾತೆ ಆಗಿದೆ ಎಂದರೆ ಸರಿಯಲ್ಲ.

ಸರ್ವೆ ನಂ. 27/10 ರಲ್ಲಿ 4 ಜನರಿಗೆ ತಲಾ 0.20 ಗುಂಟೆಯಂತೆ ಭಾಗ ಹೋಗಿದ್ದು ಸಣ್ಣೇಗೌಡರಿಗೆ 0.23 ಗುಂಟೆ ಹೋಯಿತು. ಸರ್ವೆ ನಂ. 12/2 ರಲ್ಲಿ ತಲಾ 0.12 ಗುಂಟೆ ಹಂಚಿಕೊಂಡಿದ್ದೇವೆ. ಸರ್ವೆ ನಂ. 13/5 ರಲ್ಲಿ ಒಬ್ಬರಿಗೆ 0.07 ಗುಂಟೆ ಉಳಿದವರಿಗೆ ತಲಾ 0.10 ಗುಂಟೆ ಹಂಚಿಕೊಂಡಿದ್ದೇವೆ. ಸರ್ವೆ ನಂ. 21 ರಲ್ಲಿ ನನ್ನ ಅಣ್ಣನಿಗೆ 0.13 ಗುಂಟೆ ಹೋಗಿದ್ದು ಉಳಿದವರೆಗೆ ತಲಾ 0.12 ಗುಂಟೆ ಹಂಚಿಕೊಂಡಿದ್ದೇವೆ. ಹೀಗೆ ಹಂಚಿಕೊಂಡಿರುವ ಬಗ್ಗೆ ಯಾವುದೇ ದಾಖಲೆ ಇಲ್ಲ ಎಂದರೆ ಸರಿ.

ದರಖಾಸ್ತು ಮಂಜೂರು ನನ್ನ ಅಣ್ಣನಿಗೆ ಆಗಿತ್ತು. ಅದು ಸಹ ಒಟ್ಟು ಕುಟುಂಬದ ಆಸ್ತಿ. ಸರ್ವೆ ನಂ. 30 ವಿಸ್ತೀರ್ಣ 1 ಎಕರೆ 0.39 ಗುಂಟೆ ಜಮೀನು ನನಗೆ ಮಂಜೂರಾಗಿದೆ. ಅದು ನನ್ನ ಸ್ವಯಾರ್ಜಿತ. ತಿಮ್ಮೇಗೌಡರಿಗೆ ಮಂಜೂರಾಗಿ ಎಲ್ಲರೂ ಅದನ್ನು ಹಂಚಿಕೊಂಡ ಹಾಗೆ ನನಗೆ ಮಂಜೂರಾಗಿರುವ ಸ್ವತ್ತು ಸಹ ಎಲ್ಲರಿಗೂ ಸೇರಿದಂತೆ ಮಂಜೂರಾಗಿರುವ ಒಟ್ಟು ಕುಟುಂಬದ ಸ್ವತ್ತು ಎಂದರೆ

ಸರಿಯಲ್ಲ. ಆ ಜಮೀನನ್ನು ನನಗೆ ಮಂಜೂರು ಮಾಡುವ ಮೊದಲು ನಾನು ಆ ಜಮೀನಿನ ಸ್ವಾಧೀನಾನುಭವವನ್ನು ಹೊಂದಿರಲಿಲ್ಲ. ಸರ್ಕಾರವು ನನಗೆ ಮಂಜೂರು ಮಾಡಿದ ನಂತರ ನಾನು ಅದರ ಸ್ವಾಧೀನಾನುಭವವನ್ನು ಹೊಂದಿದೆ. ನನಗೆ ಮಂಜೂರಾಗುವುದಕ್ಕಿಂತ ಮೊದಲು ಆ ಜಮೀನಿನಲ್ಲಿ ನಾನು ಯಾವುದೇ ಬೆಳೆಗಳನ್ನು ಬೆಳೆಯುತ್ತಿರಲಿಲ್ಲ. ಜಮೀನನ್ನು ನನಗೆ ಮಂಜೂರು ಮಾಡುವಂತೆ ಕೋರಿ 1993 ರಲ್ಲಿ ಅರ್ಜಿ ಸಲ್ಲಿಸಿದ್ದೆ. ಹಲವಾರು ವರ್ಷಗಳಿಂದ ಜಮೀನಿನಲ್ಲಿ ಸ್ವಾಧೀನಾನುಭವ ಹೊಂದಿರುವ ಕಾರಣ ನನಗೆ ಮಂಜೂರು ಮಾಡಿಕೊಡಿ ಎಂದು ಹೇಳಿ ಅರ್ಜಿ ಸಲ್ಲಿಸಿದ್ದೆ. ಹಿಂದಿನಿಂದಲೂ ಒಟ್ಟು ಕುಟುಂಬದ ಸ್ವಾಧೀನಾನುಭವದಲ್ಲಿ ಇದ್ದ ಜಮೀನು ಒಟ್ಟು ಕುಟುಂಬದ ಪರವಾಗಿ ನನ್ನ ಹೆಸರಿಗೆ ಮಂಜೂರಾಗಿರುವ ಕಾರಣ ಆ ಜಮೀನಿನಲ್ಲಿಯೂ ಸಹ ವಾದಿ ಮತ್ತು ಪ್ರತಿವಾದಿಗಳಿಗೆ ಉಳಿದ ದಾವಾಸ್ತಿಗಳಂತೆ ಈ ಆಸ್ತಿಯಲ್ಲಿಯೂ ಸಹ ಭಾಗಾಂಶದ ಹಕ್ಕು ಇದೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಐಟಂ ನಂ.1 ರಲ್ಲಿನ ಸರ್ವೆ ನಂ. 12/12 ರಲ್ಲಿ 0.10 ಗುಂಟೆ ಜಮೀನನ್ನು ಮತ್ತು ದಾವಾ ಅನುಸೂಚಿ ಐಟಂ ನಂ.1 ರಲ್ಲಿನ ಸರ್ವೆ ನಂ.27/10 ರಲ್ಲಿ 0.10 ಗುಂಟೆ ಜಮೀನನ್ನು ವಾದಿಯ ಮಗಳಾದ ಶಾರದಾರವರ ಮದುವೆ ಖರ್ಚಿಗಾಗಿ ಹಣ ಬೇಕಾಗಿದ್ದರಿಂದ 2005 ನೇ ಇಸವಿಯಲ್ಲಿ 3 ನೇ ಪ್ರತಿವಾದಿ ಸಣ್ಣೇಗೌಡರಿಗೆ ರೂ.1,60,000/- ಕ್ಕೆ ಮತ್ತು ವೆಂಕಟೇಶರವರಿಗೆ ದಾವಾ ಐಟಂ ನಂ. 8 ರಲ್ಲಿ 0.10 ಗುಂಟೆ ಜಮೀನನ್ನು ರೂ. 1 ಲಕ್ಷಕ್ಕೆ ಮಾರಾಟ ಮಾಡಿರುವ ಸಂಬಂಧ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇವೆ. ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ವಾದಿಯು ತನ್ನ ಮಗಳ ಮದುವೆಗಾಗಿ ಸಣ್ಣೇಗೌಡರಿಗೆ ಮತ್ತು ವೆಂಕಟೇಶರವರಿಗೆ ಯಾವುದೇ ಜಮೀನನ್ನು ಮಾರಾಟ ಮಾಡದೆ ಇದ್ದರೂ ಮತ್ತು ಯಾವುದೇ ರೀತಿಯ ಕ್ರಯಪತ್ರ ಬರೆದುಕೊಡದೆ ಇದ್ದರೂ ಸಹ ವಾದಿಯ ಜಮೀನನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಮಗಳಾದ

ಶಾರದಾರವರಿಗೆ ನಿವೇಶನ ಕೊಡಿಸುವ ಉದ್ದೇಶದಿಂದ ವಾದಿಯು ನನ್ನಿಂದ ರೂ. 2 ಲಕ್ಷ ಹಣವನ್ನು 2017 ನೇ ಸಾಲಿನಲ್ಲಿ ಪಡೆದುಕೊಂಡು ದಾವಾನುಸೂಚಿ ಐಟಂ ನಂ. 10 ರಲ್ಲಿ ವಾದಿಗೆ ಬಂದಿದ್ದ 0.13 ಗುಂಟೆ ಜಮೀನನ್ನು ನನಗೆ ಬಾಯಿ ಮಾತಿನ ಮೂಲಕ ಮಾರಾಟ ಮಾಡಿ ಸ್ವಾಧೀನಾನುಭವವ ನೀಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಭಾಗಾಂಶಕ್ಕೆ ಯಾವುದೇ ಜಮೀನು ಬಂದಿಲ್ಲ ಎಂದರೆ ಸರಿಯಲ್ಲ. ಒಂದು ವೇಳೆ ವಾದಿಯು ಯಾವುದೇ ಜಮೀನನ್ನು ಮಾರಾಟ ಮಾಡಿದಿದ್ದರೆ ಹಾಗೆ ಮಾರಾಟ ಮಾಡಿದ ಸಂಬಂಧ ದಾಖಲೆ ಇರುತ್ತಿತ್ತು ಎಂದರೆ ಸರಿಯಲ್ಲ. ವಾದಿಯು ತನ್ನ ಮಗಳಾದ ಶಾರದಾರವರ ಹೆಸರಿಗೆ ಮೇಲುಕೋಟೆ ಹೋಬಳಿ ಹಳೆ ಬೀಡು ಗ್ರಾಮದ ಚಿಕ್ಕತಮ್ಮೇಗೌಡರ ಮಗ ಹೆಚ್ ಸಿ ಧನಂಜಯರವರಿಂದ ರೂ. 2 ಲಕ್ಷಗಳಿಗೆ ಶ್ರೀರಂಗಪಟ್ಟಣ ತಾಲ್ಲೋಕಿನ ಬೆಳವಾಡಿ ಗ್ರಾಮದ ಸರ್ವೆ ನಂ. 148/2 ರಲ್ಲಿ 0.03 ಗುಂಟೆ ಜಮೀನನ್ನು ಖರೀದಿಸಿದ್ದಾರೆ ಎಂದು ನಾನು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಹಾಗೆ ಖರೀದಿಸಿದ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ವಾದಿಯ ಮಗಳು ಮದುವೆಯಾಗಿ ಗಂಡನ ಜೊತೆಯಲ್ಲಿ ಇದ್ದಾರೆ ಎಂದರೆ ಸರಿ. ನಾನು ಹಾಗೂ ನನ್ನ ಇತರ ಸಹೋದರರು ವಾದಿಗೆ ಕಿರುಕುಳ ನೀಡುತ್ತಿದ್ದ ಕಾರಣ ವಾದಿಯ ಮಗಳೇ ವಾದಿಯ ಕಷ್ಟ ಸುಖವನ್ನು ನೋಡಿಕೊಳ್ಳುತ್ತಿದ್ದು ವಾದಿಯ ಮಗಳಿಗೆ ಹಣದ ನೆರವು ಒದಗಿಸುವ ಸಾಮರ್ಥ್ಯ ವಾದಿಗೆ ಇಲ್ಲ ಎಂದರೆ ವಾದಿಯು ಸಾಲ ಮಾಡಿ ಮಗಳಿಗೆ ಆರ್ಥಿಕ ನೆರವು ಒದಗಿಸಿದ್ದಾರೆ. ಸಾಲ ಮಾಡಿ ವಾದಿಯು ತನ್ನ ಮಗಳಿಗೆ ಆರ್ಥಿಕ ನೆರವು ಒದಗಿಸಿರುವ ಬಗ್ಗೆ ಯಾವುದೇ ದಾಖಲೆಗಳು ಇಲ್ಲ ಎಂದರೆ ಬಾಯಿ ಮಾತಿನ ದಾಖಲೆ ಇದೆ. ಯಾರೇ ಆಗಲಿ ಹಣಕಾಸು ನೀಡುವಾಗ ದಾಖಲೆ ಮಾಡಿಕೊಳ್ಳುತ್ತಾರೆ, ಆದರೆ ವಾದಿಯು ಯಾವುದೇ ಹಣಕಾಸು ನೆರವನ್ನು ಪಡೆಯದೆ ಇರುವ ಕಾರಣ ಯಾವುದೇ ದಾಖಲೆ ಇಲ್ಲ ಎಂದರೆ

ಅಣ್ಣ ತಮ್ಮಂದಿರ ನಡುವೆ ಹಣಕಾಸು ವ್ಯವಹಾರದಲ್ಲಿ ದಾಖಲೆಗಳನ್ನು ಮಾಡಿಕೊಳ್ಳುವುದಿಲ್ಲ.

ನಾನು ನೀಡಿದ ಕಿರುಕುಳದಿಂದ ಮತ್ತು ಒಟ್ಟು ಕುಟುಂಬದ ಆಸ್ತಿಗಳಲ್ಲಿ ನಾನು ಹಾಗೂ ಸಣ್ಣೇಗೌಡರು ವಾದಿಗೆ ತಿಳಿಯದ ಹಾಗೆ ಮರಮುಟ್ಟುಗಳನ್ನು ಕಡಿದ ಕಾರಣ ವಾದಿಯು ನಮ್ಮ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು ಎಂದರೆ ಸರಿ. ತಿಮ್ಮೇಗೌಡರ ಅನುಮತಿ ಪಡೆದು ಆ ಮರಮುಟ್ಟುಗಳನ್ನು ಕಡಿಯಲು ಯಾವುದೇ ತೊಂದರೆ ಇರಲಿಲ್ಲ. ವಾದಿಗೆ ಕೇವಲ ಹೆಣ್ಣು ಮಕ್ಕಳು ಇದ್ದು ಆ ಹೆಣ್ಣು ಮಕ್ಕಳಿಗೆ ಮದುವೆಯಾಗಿ ಬೇರೆ ಊರಿನಲ್ಲಿ ವಾಸವಾಗಿರುವ ಕಾರಣ ನಾವು ವಾದಿಯ ಮೇಲೆ ದಬ್ಬಾಳಿಕೆ ನಡೆಸಿ ಮರಗಳನ್ನು ಕಡಿದಾಗ ವಾದಿಯು ನಮ್ಮನ್ನು ಕೇಳಲು ಬಂದಾಗ ನಾವು ವಾದಿಗೆ ಬೆದರಿಕೆ ಹಾಕಿದ್ದೇವೆ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**